**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**

**ಎಸ್.ಸಿ. ನಂಃ 10004/2024**

**ಚಾಸಾ ಃ 20**

**ಪ್ರಾಸಾ ಃ 14**

| | | |
|---|---|---|
| **ಹೆಸರು** | **ಃ** | ಮೌಲಾ |
| **ತಂದೆಯ ಹೆಸರು** | **ಃ** | ಸೈಯದ್ ಅಮೀರ್ |
| **ವಯಸ್ಸು** | **ಃ** | 45 ವರ್ಷ |
| **ವೃತ್ತಿ** | **ಃ** | ಆಟೋ ಡ್ರೈವರ್. |
| **ವಾಸ** | **ಃ** | ಶಾಂತಿನಗರ, ದೊಡ್ಡಬಳ್ಳಾಪುರ. |

**ಈ ದಿನ ದಿನಾಂಕಃ 15.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ**

1. ಕಳೆದ 2 ವರ್ಷಗಳ ಹಿಂದೆ ನಾನು ಡಿ ಕ್ರಾಸ್ ನಲ್ಲಿದ್ದಾಗ ಪೊಲೀಸರು ನನ್ನನ್ನು ಠಾಣೆಗೆ ಕರೆದುಕೊಂಡು ಹೋಗಿ ಸಹಿ ಪಡೆದುಕೊಂಡಿರುತ್ತಾರೆ. ಯಾವ ವಿಚಾರಕ್ಕೆಂದು ನನಗೆ ಗೊತ್ತಿರುವುದಿಲ್ಲ, ಪೊಲೀಸರು ಸಹಿ ಮಾಡು ಎಂದು ಹೇಳಿದ್ದರಿಂದ ಮಾಡಿರುತ್ತೇನೆ. ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದು ಇರುತ್ತದೆ. ಸದರಿ ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ನಿಪಿ-30 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-30(ಎ) ಎಂದು ಗುರುತಿಸಲಾಯಿತು.

2. ಠಾಣೆಗೆ ಹೋದ ನಂತರ ನನ್ನನ್ನು ಯಲಹಂಕದ ಡಿ ಮಾರ್ಟ್ ಗೆ ಕರೆದುಕೊಂಡು ಹೋಗಿರುತ್ತಾರೆ. ಆ ಸಮಯದಲ್ಲಿ ಪೊಲೀಸರು ಮತ್ತು ಅವರ ಜೊತೆ ಇನ್ನೊಬ್ಬರು ಯಾರೋ ಇದ್ದರು. ಡಿ ಮಾರ್ಟ್ ಗೆ ಹೋಗಿದ್ದು ಅಲ್ಲಿ ಏನು

ಮಾಡಿರುತ್ತಾರೋ ಗೊತ್ತಿರುವುದಿಲ್ಲ. ನಂತರ ನನ್ನನ್ನು ದೊಡ್ಡಬಳ್ಳಾಪುರಕ್ಕೆ ಕರೆದುಕೊಂಡು ಬಂದು ಬಿಟ್ಟಿರುತ್ತಾರೆ.

3. ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದು ಇರುತ್ತದೆ. ಸದರಿ ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ನಿಪಿ-31 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-31(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಮಹಾಜರ್ ಗೆ ಡಿ ಮಾರ್ಟ ನಲ್ಲಿ ಸಹಿ ಮಾಡಿರುತ್ತೇನೆ.

4. ಈಗ ನೋಡುತ್ತಿರುವ ಪೋಟೊಗಳಲ್ಲಿ ನಾನು ಇರುತ್ತೇನೆ. ಸದರಿ ಪೋಟೋಗಳಲ್ಲಿ ಪೊಲೀಸರು ಮತ್ತು ನಮ್ಮ ಜೊತೆ ಬಂದ ಮತ್ತು ಪೊಲೀಸರು ಕರೆದುಕೊಂಡು ಬಂದ ಇನ್ನೊಬ್ಬರು ಇರುತ್ತಾರೆ, ಅವರು ನಿಕ್ಕರ್ ಮತು ಟಿ-ಶರ್ಟ್ ಹಾಕಿಕೊಂಡಿರುತ್ತಾರೆ. ಸದರಿ ಸಾಕ್ಷಿದಾರರು ಸದರಿ ಪೋಟೋಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ-32 ಮತ್ತು ನಿಪಿ-33 ಎಂದು ಗುರುತಿಸಲಾಯಿತು.

5. ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದು ಇರುತ್ತದೆ. ಸದರಿ ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ನಿಪಿ-34 ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ನಾನು ಎಲ್ಲಿ ಸಹಿ ಮಾಡಿರುತ್ತೇನೆಂದು ನೆನಪು ಇರುವುದಿಲ್ಲ.

6. ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದು ಇರುತ್ತದೆ. ಸದರಿ ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ನಿಪಿ-35 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-35(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಸಹಿಯನ್ನು ಎಲ್ಲಿ ಮಾಡಿರುತ್ತೇನೆಂದು ಗೊತ್ತಿರುವುದಿಲ್ಲ. ಅದರಲ್ಲಿರುವ ವಿಚಾರ ನನಗೆ ಗೊತ್ತಿರುವುದಿಲ್ಲ.

7. ಈಗ ನೋಡುತ್ತಿರುವ ಪೋಟೊದಲ್ಲಿ ನಾನು ಇರುತ್ತೇನೆ ಮತ್ತು ನಾನು ಸೇರಿ ಒಟ್ಟು 5 ಜನ ಇರುತ್ತೇವೆ. ಸದರಿ ಪೋಟೋದಲ್ಲಿ ನಾನು, ಪೊಲೀಸರು ಮತ್ತು ನಮ್ಮ ಜೊತೆ ಇದ್ದ ಆಟೋದ ಒಬ್ಬರು ಮತ್ತು ಇನ್ನೊಬ್ಬರು ಇರುತ್ತಾರೆ, ಅವರು ಯಾರೋ ಗೊತ್ತಿರುವುದಿಲ್ಲ. ಅವರು ನಿಕ್ಕರ್ ಮತ್ತು ಟಿ-ಶರ್ಟ್ ಹಾಕಿಕೊಂಡಿರುತ್ತಾರೆ. ಸದರಿ ಸಾಕ್ಷಿದಾರರು ಸದರಿ ಪೋಟೋವನ್ನು ನೋಡಿ ಗುರುತಿಸಿದ್ದರಿಂದ ನಿಪಿ-36 ಎಂದು ಗುರುತಿಸಲಾಯಿತು. ನಿಪಿ-36 ರ ಪೋಟೊವನ್ನು ಬಾಶೆಟ್ಟಿಹಳ್ಳಿಯ ಫ್ಯಾಕ್ಟರಿ ಸರ್ಕಲ್ ನಲ್ಲಿ ತೆಗೆದಿರುತ್ತಾರೆ. ಯಾವ ವಿಚಾರಕ್ಕೆ ಪೊಟೋ ತೆಗೆದಿರುತ್ತಾರೆಂದು ಗೊತ್ತಿರುವುದಿಲ್ಲ. ಅಲ್ಲಿ ಕರೆದುಕೊಂಡು ಹೋಗಿ ನಿಲ್ಲಿಸಿ ಪೊಟೋ ತೆಗೆದಿರುತ್ತಾರೆ.

8. ಈಗ ನೋಡುತ್ತಿರುವ ಮುದ್ದೆ ಮಾಲಿನ ಮೇಲೆ ಅಂಟಿಸಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ. ಸದರಿ ಸಹಿಯನ್ನು ನಾನು ಎಲ್ಲಿ ಮಾಡಿರುತ್ತೇನೆಂದು ಗೊತ್ತಿರುವುದಿಲ್ಲ. ಅದೆ ರೀತಿ ಈಗ ನೋಡುತ್ತಿರುವ ಕವರಿನ ಮೇಲೆ ಅಂಟಿಸಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ. ಸದರಿ ಸಹಿಯನ್ನು ನಾನು ಎಲ್ಲಿ ಮಾಡಿರುತ್ತೇನೆಂದು ನನಗೆ ನೆನಪು ಇರುವುದಿಲ್ಲ.

9. ನ್ಯಾಯಾಲಯದಲ್ಲಿ ವಿ ಸಿ ಮೂಲಕ ಹಾಜರುಪಡಿಸಿದ ಆರೋಪಿಯನ್ನು ತೋರಿಸಿ ಸದರಿ ವ್ಯಕ್ತಿಯನ್ನು ಎಲ್ಲಿಯಾದರೂ ನೋಡಿದ್ದೀರಾ ? ಎಂದು ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರಲ್ಲಿ ಪ್ರಶ್ನಿಸಿದಾಗ ಸದರಿ ಸಾಕ್ಷಿದಾರರು ತಾನು ನೋಡಿರುವುದಿಲ್ಲವೆಂದು ಉತ್ತರಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿದಾರರು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಸಾಕ್ಷ್ಯ ನುಡಿದಿದ್ದರಿಂದ ವಾಟೀ ಸವಾಲು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಆಲಿಸಿ ಪರಿಶೀಲಿಸಿ ಅನುಮತಿ ನೀಡಲಾಯಿತು. )**

**ವಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

10. ನನ್ನನ್ನು ಆ ದಿನ ಪೊಲೀಸ್ ಠಾಣೆಗೆ ಕರೆಸಿದ್ದರೂ ಎಂದು ಹೇಳುವ ದಿನ ದಿನಾಂಕ 14.04.2023 ಆಗಿತ್ತು ಎಂದರೆ ಜ್ಞಾಪಕ ಇರುವುದಿಲ್ಲ. ನಾನು ಪೊಲೀಸ್ ಠಾಣೆಗೆ ಹೋಗಿದ್ದ ಸಮಯದಲ್ಲಿ ಆ ದಿನ ಠಾಣೆಯಲ್ಲಿ ಇಂದು ನ್ಯಾಯಾಲಯದಲ್ಲಿ ವಿ ಸಿ ಮೂಲಕ ನೋಡುತ್ತಿರುವ ವ್ಯಕ್ತಿ (ಆರೋಪಿ) ಇದ್ದನು ಎಂದರೆ ಸರಿಯಲ್ಲ. ಸದರಿ ಪೊಲೀಸರು ಆತನನ್ನು ತೋರಿಸಿ ಆತನ ಹೆಸರು ಸ್ಯಾಮ್ ಮರಿಯಾದಾಸ್ ಎಂದು ಆತನ ವಿರುದ್ಧ ನಮ್ಮ ಠಾಣೆಯಲ್ಲಿ ಕೊಲೆ ಮತ್ತು ಕೊಲೆ ಪ್ರಯತ್ನದ ಪ್ರಕರಣದ ದಾಖಲೆಯಾಗಿರುತ್ತದೆ ಎಂದು ಮತ್ತು ಆತನನ್ನು ವಿಚಾರಿಸಿದಾಗ ವಿಚಾರಣೆಯ ಸಮಯದಲ್ಲಿ ಕೃತ್ಯದ ಬಗ್ಗೆ ಒಪ್ಪಿಕೊಂಡು ತನ್ನ ಒಪ್ಪಿ ಗೆಯಲ್ಲಿ ಕೃತ್ಯಕ್ಕೆ ಬಳಸಿದ ಚಾಕುವನ್ನು ಖರೀದಿ ಮಾಡಿದ ಸ್ಥಳ ಮತ್ತು ತಾನು ಖರೀದಿಸಿದ ಚಾಕೂಗಳ ಪೈಕಿ 2 ಚಾಕುಗಳನ್ನು ಬಿಸಾಡಿದ ಸ್ಥಳವನ್ನು ತೋರಿಸುವುದಾಗಿ ತಿಳಿಸಿರುತ್ತಾನೆಂದು ಮತ್ತು

ಆತನೊಂದಿಗೆ ಹೋಗಿ ಸದರಿ ಸ್ಥಳಗಳ ಪಂಚನಾಮೆಯನ್ನು ಜರುಗಿಸಬೇಕಾಗಿದೆ ಎಂದು ಮತ್ತು ಸದರಿ ಪಂಚನಾಮೆಗೆ ಸಹಕರಿಸುವಂತೆ ಕೋರಿ ನಿಪಿ 30 ರಂತೆ ನನಗೆ ನೋಟಿಸು ಜಾರಿ ಮಾಡಿದ್ದು ಅದನ್ನು ನಾನು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆ ಕಾಲದಲ್ಲಿ ನಮ್ಮ ಜೊತೆ ಠಾಣೆಯಲ್ಲಿ ಚಾಸಾ-19 ರವಿಚಂದ್ರನೂ ಸಹ ಇದ್ದರು ಎಂದರೆ ಸರಿಯಲ್ಲ.

11. ನಂತರ ಅದೇ ದಿನ ನನ್ನನ್ನು ಮತ್ತು ರವಿಚಂದ್ರನನ್ನು ಪೊಲೀಸರು ಆರೋಪಿ ಮತ್ತು ಸಿಬ್ಬಂದಿಯೊಂದಿಗೆ ಠಾಣಾ ಜೀಪಿನಲ್ಲಿ ದೊಡ್ಡಬಳ್ಳಾಪುರದ ಠಾಣೆಯಿಂದ ಹೊರಟು ಮಾರಸಂದ್ರ, ರಾಜಾನುಕುಂಟೆ ಮಾರ್ಗವಾಗಿ ಹೋಗಿ ಯಲಹಂಕಕ್ಕೆ ಹೋಗಿ ಯಲಹಂಕ ನ್ಯೂಟೌನ್ ನಿನ ಒಂದು ಶಾಪಿಂಗ್ ಮಾಲ್ ಮುಂಭಾಗದಲ್ಲಿ ಜೀಪ್ ನ್ನು ನಿಲ್ಲಿಸುವಂತೆ ಆರೋಪಿ ಹೇಳಿದ್ದರಿಂದ ಜೀಪ್ ನ್ನು ನಿಲ್ಲಿಸಿ ಎಲ್ಲರೂ ಜೀಪಿನಿಂದ ಇಳಿದಿದ್ದು ಆಗ ಆರೋಪಿಯು ಸದರಿ ಶಾಪಿಂಗ್ ಮಾಲ್ ನ್ನು ತೋರಿಸಿ ಇದೇ ಶಾಪಿಂಗ್ ಮಾಲ್ ನಲ್ಲಿ ನಾನು ದಿನಾಂಕ 11.04.2023 ರಂದು ಮಧ್ಯಾಹ್ನ 2-45 ಗಂಟೆ ಸಮಯದಲ್ಲಿ 199 ರೂ. ಗಳಿಗೆ 3 ಪೀಸ್ ಚಾಕುಗಳಿರುವ ಒಂದು ಸೆಟ್ಟನ್ನು ಖರೀದಿಸಿರುತ್ತಾನೆ ಎಂದು ಪೊಲೀಸರಿಗೆ ಹೇಳಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಶಾಪಿಂಗ್ ಮಾಲ್ ವಿಶಾಲ್ ಮಾರ್ಟ್ ಆಗಿರುತ್ತದೆ ಎಂದರೆ ಅದು ಡಿ ಮಾರ್ಟ್ ಆಗಿತ್ತು.

12. ಅಲ್ಲಿ ಒಳಗೆ ಕರೆದುಕೊಂಡು ಹೋಗಿ ಅವರು ಖರೀದಿಸಿದ್ದ ಕೌಂಟರ್ ನ್ನೂ ಸಹ ತೋರಿಸಿರುತ್ತಾರೆ ಸರಿಯಲ್ಲ. ಅಲ್ಲಿ ಪೊಲೀಸರು ಶಾಪಿಂಗ್ ಮಾಲ್ ನ ಮ್ಯಾನೇಜರ್ ಸುರೇಶ್ ರವರವನ್ನು ವಿಚಾರಣೆ ಮಾಡಿದ್ದು ಅವರೂ ಸಹ ಆರೋಪಿಯನ್ನು ನೋಡಿ

ಗುರುತಿಸಿ ಆರೋಪಿಯು ಚಾಕುವನ್ನು ಖರೀದಿಸಿದ್ದ ಬಿಲ್ ನ್ನು ನೋಡಿ ಅದರ ಪ್ರತಿಯನ್ನು ಪೊಲೀಸರಿಗೆ ನೀಡಿರುತ್ತೆರೆಂದರೆ ಗೊತ್ತಿರುವುದಿಲ್ಲ. ಸದರಿ ಬಿಲ್ ನ ಪ್ರತಿಯನ್ನು ಈಗ ತೋರಿಸುತ್ತಿರುವ ಕವರಿನಲ್ಲಿ ಹಾಕಿ ಆ ಬಗ್ಗೆ ಸಹಿ ಪಡೆದುಕೊಂಡಿರುತ್ತಾರೆಂದರೆ ಸರಿಯಲ್ಲ. ಆ ಬಗ್ಗೆ ನಿಪಿ-32 ಮತ್ತು ನಿಪಿ-33 ರ ಪೋಟೋವನ್ನು ತೆಗೆದಿರುತ್ತಾರೆಂದರೆ ಗೊತ್ತಿರುವುದಿಲ್ಲ.

13. ಆ ಬಗ್ಗೆ ನಿಪಿ-31 ರಂತೆ ಮಹಾಜರ್ ನ್ನು ಅದೇ ದಿನ ಬೆಳಗ್ಗೆ 10-00 ಗಂಟೆ ಯಿಂದ ಬೆಳಗ್ಗೆ 11-15 ಗಂಟೆಯವರೆಗೆ ಬರೆದು ಅದರಲ್ಲಿರುವ ವಿಚಾರ ನನಗೆ ಓದಿ ಹೇಳಿ ಅದರಲ್ಲಿ ಸಹಿ ಪಡೆದುಕೊಂಡಿರುತ್ತಾರೆಂದರೆ ಸರಿಯಲ್ಲ.

14. ನಂತರ ಆರೋಪಿಯು ಮುಂದುವರೆದು ಸದರಿ ಚಾಕುಗಳ ಪೈಕಿ 2 ಚಾಕುಗಳನ್ನು ಬಿಸಾಡಿದ ಸ್ಥಳವನ್ನು ತೋರಿಸುತ್ತೇನೆಂದು ಹೇಳಿದ್ದರ ಮೇರೆಗೆ ಆ ಬಗ್ಗೆಯೂ ಸಹ ಮಹಾಜರ್ ಮಾಡಬೇಕಾಗಿರುವುದರಿಂದ ಅದಕ್ಕೂ ಸಹ ಸಹಕರಿಸುವಂತೆ ಕೋರಿ ನಿಪಿ-34 ರ ನೋಟಿಸು ಜಾರಿ ಮಾಡಿ ನನ್ನ ಸಹಿ ಪಡೆದುಕೊಂಡಿರುತ್ತಾರೆಂದರೆ ಸರಿಯಲ್ಲ.

15. ಅನಂತರ ಆರೋಪಿಯು ನೀಡಿದ ಮಾಹಿತಿಯಂತೆ ನಿಪಿ-36 ರ ಪೊಟೋ ತೆಗದ ಸ್ಥಳವಾದ ಫ್ಯಾಕ್ಟರಿ ಸರ್ಕಲ್ ನಿಂದ ಬ್ಯಾಂಕ್ ಸರ್ಕಲ್ ಕಡೆ ಹೋಗುವ ಸರ್ವಿಸ್ ರಸ್ತೆಯಲ್ಲಿನ ಹಳೆಯ ಬಿ ಪಿ ಎಲ್ ಫ್ಯಾಕ್ಟರಿಯ ಪಕ್ಕದ ಸರ್ವಿಸ್ ರಸ್ತೆಯಲ್ಲಿ ಒಂದು ಮರದ ಬಳಿ ಪಕ್ಕದಲ್ಲಿನ ಚರಂಡಿಯಲ್ಲಿ ಬಿಸಾಡಿದ 2 ಸ್ಟೀಲ್ ಚಾಕುಗಳನ್ನು ಹೊರೆಗೆ ತೆಗೆದು ಹಾಜರುಪಡಿಸಿರುತ್ತಾರೆಂದರೆ ಗೊತ್ತಿರುವುದಿಲ್ಲ. ಅವುಗಳನ್ನು ಪೊಲೀಸರು ಕವರ್ ಸಮೇತ ಇದುದ್ದನು ಪರಿಶೀಲಿಸಿ ವಶಕ್ಕೆ ಪಡೆದುಕೊಂಡು ನಿಪಿ-35 ರಂತೆ ಮಹಾಜರ್ ನ್ನು ಬೆಳಗ್ಗೆ 11-45 ಗಂಟೆ ಯಿಂದ ಮಧ್ಯಾಹ್ನ 12-30 ವರೆಗೆ

ಬರೆದು ಅದರಲ್ಲಿರುವ ವಿಚಾರವನ್ನು ನನಗೆ ಓದಿ ಹೇಳಿ ಅಲ್ಲಿ ನನ್ನ ಸಹಿ ಪಡೆದುಕೊಂಡಿರುತ್ತಾರೆಂದರೆ ಸರಿಯಲ್ಲ.

16. ಸದರಿ ಚಾಕುಗಳನ್ನು ಕವರಿನೊಂದಿಗೆ ಪ್ಯಾಕ್ ಮಾಡಿಕೊಂಡ ಬಗ್ಗೆ ಅದರ ಮೇಲೆ ಅಂಟಿಸಿರುವ ಚೀಟಿಯಲ್ಲಿ ಮೇಲ್ಕಂಡ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆಂದರೆ ಸರಿಯಲ್ಲ.

17. ನಿಪಿ-30, 31, 34 ಮತ್ತು ನಿಪಿ-35 ರಲ್ಲಿರುವ ಎಲ್ಲಾ ಅಂಶಗಳು ನನಗೆ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ವಾಟೀ ಸವಾಲು ಆರೋಪಿ ಪರ ಶ್ರೀ ಎಸ್ ಎಸ್ ವಕೀಲರಿಂದಃ**

18. ಯಾವುದೇ ಪ್ರಕರಣ ಇದ್ದಲ್ಲಿ ನನ್ನನ್ನು ಸಾಕ್ಷಿದಾರರಾಗಿ ಪೊಲೀಸರು ಕರೆಸುತ್ತಾರೆಂದರೆ ಸರಿ. ಆ ದಿನ ನನ್ನನ್ನು ಎಲ್ಲೆಲ್ಲಿ ಕರೆದುಕೊಂಡು ಹೋಗಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸಾಕ್ಷಿದಾರರು ಮುಂದುವರೆದು ಯಲಹಂಕಕ್ಕೆ ಕರೆದುಕೊಂಡು ಹೋಗಿರುತ್ತಾರೆಂದು ಸ್ವತಃ ನುಡಿಯುತ್ತಾರೆ. ಪೊಲೀಸರಿಗೆ ಸಹಾಯ ಮಾಡಲು ನಾನು ಸಹಿ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ